

ಮನೆ ಕಟ್ಟಿಸುವ ಇಂಗಿತವಿದೆ ಅಂತ ಗೊತ್ತಾಗಿ, ಬಾಲ್ಯದ ಗೆಳೆಯನೊಬ್ಬ, 'ಮನೇನ ಕೆಟ್ಟು ಕೆಟ್ಟದಾಗಿ ಕಟ್ಟಿಸ್ಬೇಡ. ಅದಕ್ಕೆಂದೇ ವಿನ್ಯಾಸಕಾರರು (ಆರ್ಕಿಟೆಕ್ಟ್) ಇದ್ದಾರೆ. ಅವರಿಂದ ಡಿಸೈನು ಮಾಡಿಸು' ಅಂತ ಉಪದೇಶ ಮಾಡಿ ವಿನ್ಯಾಸಕಾರರ ವಿಳಾಸ ಕೊಟ್ಟು ಹೋದ. ನಾವೂ ತಡ ಮಾಡಲಿಲ್ಲ.

ನಮ್ಮನ್ನು ಆಪಾದಮಸ್ತಕ ಅವಲೋಕಿಸಿ ನಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಅಳೆದು ತೂಗಿ ಆ ವಿನ್ಯಾಸಕಾರರು, 'ನಿಮ್ಮ ಮನೆ ವಾಸ್ತು ಪ್ರಕಾರವಾಗಿರಬೇಕೊ? ವಸ್ತು ಪ್ರಕಾರವಾರಬೇಕೊ? ಎಂಬ ಪ್ರಶ್ನೆ ಎಸೆದಾಗ ತಬ್ಬಿಬ್ಬಾದೆವು.

ನಾವು, 'ಹಾಗಂದ್ರೇನು ಸ್ವಾಮಿ? ನಮಗೆ ಈ ವಿಚಾರದ ಬಗ್ಗೆ ಎಳ್ಳಷ್ಟೂ ಗಂಧವಿಲ್ಲ' ಎಂದು ತಪ್ಪೊಪ್ಪಿಕೊಂಡೆವು. ಈ ಉತ್ತರವನ್ನು ಮೊದಲೇ ನಿರೀಕ್ಷಿಸಿದಂತಿದ್ದ ಅವರು, 'ಹಾಗಾದ್ರೆ, ಮೊದಲು ವಾಸ್ತು ಪ್ರಕಾರದ ಬಗ್ಗೆ ಹೇಳ್ತೀನಿ' ಎಂದು ಮಾತಿಗಾರಂಭಿಸಿದರು.

'ವಾಸ್ತುಶಾಸ್ತ್ರದ ಮೂಲ ಉದ್ದೇಶ ಮನೆಯಲ್ಲಿ ವಾಸಿಸುವವರಿಗೆ ಒಳ್ಳೆಯ ಗಾಳಿ ಹಾಗೂ ಬೆಳಕಿನ ವ್ಯವಸ್ಥೆ ಇರಬೇಕೆಂಬುದು. ಬಾಕಿ ವಿಚಾರಗಳೆಲ್ಲ ಗೌಣ ಅಥವಾ ಆಪ್ಷನಲ್. ಇಂದಿನ ಸಮಾಜದಲ್ಲಿ ಮನೆ ಕಟ್ಟಿಸುವವರಿಗೆ ಕಂಡಾಪಟ್ಟೆ ಹೆದರಿಸಿ ಭಯಭೀತರನ್ನಾಗಿ ಮಾಡಿಸಿ ಖುಷಿಪಡುವವರೇ ಹೆಚ್ಚು. ಮನೆ ಸಾಲದ ಕಂತಿನ ಹೊರೆಯನ್ನು ಇನ್ನೇನು ಇಳಿಸಿ ಆರಾಮ ಎನ್ನಬೇಕೆನ್ನುವಾಗ, ಸುತ್ತಮುತ್ತಲಿನವರು ಆಹ್ವಾನವಿಲ್ಲದೆಯೆ ಮನೆಗೆ ಬಂದು ನೀಡುವ ಸಲಹೆಗಳು ಕಡುಬೇಸಿಗೆಯಲ್ಲೂ ನಡುಕ ಹುಟ್ಟಿಸುವಂಥದ್ದು. ಉದಾಹರಣೆಗೆ ನೋಡಿ, 'ವಾಟರ್ ಸಂಪನ್ನು ಗ್ಯಾರೇಜು ಮುಂದೇಕಿಟ್ಟಿರಿ? ಜಲಮೂಲೆಗೆ ಇದು ವಿರುದ್ಧವಿದೆಯಲ್ಲ, ದಯವಿಟ್ಟು ಹಿಂದುಗಡೆಗೆ ಶಿಫ್ಟ್ ಮಾಡಿ, ಹೀಗ್ಯಾರು ಹೊರ ಬಾಗಿಲನ್ನು ಇಡುತ್ತಾರೆ? ದಿಕ್ಕೇ ಸರಿಯಿಲ್ಲವಲ್ಲ, ಕೂಡಲೇ ಬಾಗಿಲು ತೆಗೆಸಿ, ಗೋಡೆ ಮುಚ್ಚಿ ಉತ್ತರ ದಿಕ್ಕಿಗೆ ಓಪನ್ ಮಾಡಿಕೊಳ್ಳಿ, ಇಷ್ಟು ದಿವಸ ಕಳ್ಳಕಾಕರು, ದರೋಡೆಕೋರರೂ ಸುಮ್ಮನಿದ್ದಿದ್ದೇ ಹೆಚ್ಚು.'

'ಬುದ್ಧಿಯಿದೆಯೇ? ಅಡುಗೆ ಮನೆಯನ್ನು ಇಲ್ಲಿ ಕಟ್ಟಲು ಯಾರು ಸಲಹೆ ಕೊಟ್ಟಿದ್ದು? ಜಲಮೂಲೆ, ಅಗ್ನಿಮೂಲೆ ಇತ್ಯಾದಿ ವಿಚಾರಗಳ ಬಗ್ಗೆ ಯಾರೂ ತಿಳಿ ಹೇಳಲಿಲ್ಲವೆ? ನಿಮ್ಮ ಹೆಂಡತಿ ಆಯುಸ್ಸು ಗಟ್ಟಿಯಿರಬೇಕು. ಸಿಲಿಂಡರ್ ಸ್ಫೋಟ, ಗ್ಯಾಸ್ ಲೀಕು, ಎಲೆಕ್ಟ್ರಿಕ್ ಶಾಕಿಗೆ ಒಳಗಾಗಿ ಆಸ್ಪತ್ರೆ ಸೇರಿಲ್ಲ'.

'ಯೋಚ್ನೆ ಮಾಡ್ನೋಡಿ, ಮೇಲಿಂದ ಮೇಲೆ ಹೀಗೆ ವಾಲ್ ಬೇರಿಂಗ್ ವಾಲುಗಳನ್ನು ಒಡೆಯುವ ಬದಲು ಗಟ್ಟಿ ನಿರ್ಧಾರ ಮಾಡಿ, ಇಡೀ ಮನೆ ಕೆಡವಿ ಬಿಡಿ. ಇದೇ ಫೌಂಡೇಷನ್ ಉಪಯೋಗಿಸಿ ವಾಸ್ತು ಪ್ರಕಾರ ಹೊಸ ಮನೆ ಕಟ್ಟಿ, ಆರಾಮವಾಗಿರಿ (ಸಾಧ್ಯವಾದರೆ!).'

'ಇಂಥ ಸಲಹೆಗಳಿಂದ ನಿಮ್ಮ ಚಿತ್ತ ಕಾಪಾಡುವುದೇ ವಿನ್ಯಾಸಕಾರರ ಮಹತ್ತರ ಜವಾಬ್ದಾರಿ. ಇದು ಇಲ್ಲಿಗೇ ಮುಗಿದಿಲ್ಲ, ಮುಂದುವರೆಸಲೆ?' ಎಂದು ವಿನ್ಯಾಸಕಾರರು ಹೆದರಿಸುವ ರೀತಿ ನಮ್ಮತ್ತ ದೃಷ್ಟಿ ಬೀರಿದರು. ಮುಖದಲ್ಲಿಳಿಯುತ್ತಿದ್ದ ಬೆವರು ಒರೆಸಿಕೊಂಡೆವು.

'ಸ್ವಾಮಿ, ನಾವೂ ಓದಿಕೊಂಡವರು. ಆಚಾರ, ವಿಚಾರಗಳನ್ನು ಕೊಂಚ ಬಲ್ಲವರು. ಇಂಥ ಗೊಡ್ಡು ಸಲಹೆಗಳಿಗೆ ಹೆದರುವ ಆಸಾಮಿಗಳು ನಾವಲ್ಲ. ಅದೇನೊ ವಸ್ತು ಪ್ರಕಾರದ ಮನೆಯೆಂದಿರಿ,



